# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 950
2. ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್
3. ಉತ್ತರಿ ಸಬೇಕಾದ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ,ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೆರೆಗಳ ಬಳಕೆದಾರರ ಸಂಘ ಇದೆಯೇ; | ಕಲಬುರಗಿ ಜಿಲ್ಲೆಯಲ್ಲಿ 7 ಕೆರೆಗಳಿಗೆ ಮತ್ತು ಯಾದಗಿರಿ ಜಿಲ್ಲೆಯಲ್ಲಿ 7 ಕೆರೆಗಳಿಗೆ ಕೆರೆ ಬಳಕೆದಾರರ ಸಂಘಗಳನ್ನು ರಚಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ಕೆರೆಗಳ ಸುತ್ತ ಜೀವ ಪರಿಸರವನ್ನು ಉಳಿಸಿಕೊಂಡು ಅವುಗಳ ಪುನರುಜ್ಜೀ-ವನಗೊಳಿಸುವುದಕ್ಕಾಗಿ ಕೆರೆಗಳ ಬಳಕೆದಾರರ ಸಂಘಗಳನ್ನು ಬಲಿಷ್ಠಗೊಳಿಸಿ ಕೆರೆ ಅಭಿವೃದ್ಧಿಗೆ ಪಾಲುದಾರರನ್ನಾಗಿ ಮಾಡಿ ಜಲ ಬಳಕೆ ಮಾಡಲು ಸರ್ಕಾರ ಅರ್ಥ ಪೂರ್ಣ ಕ್ರಿಯಾ ಯೋಜನೆ ಸಿದ್ಧಪಡಿಸ-ಲಾಗಿದೆಯೇ; (ವಿವರ ನೀಡುವುದು) | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದವತಿಯಿಂದ ಕ್ರಿಯಾ ಯೋಜನೆಯನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ. |
| ಇ | ಸದರಿ ಜಿಲ್ಲೆಗಳ ಕೆರೆಗಳಿಗೆ ನೀರು ತುಂಬಿಸಿ ಈ ಜಿಲ್ಲೆಗಳ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ವೃದ್ಧಿಗೊಳಿಸಲು ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ ಈ ಕೆಳಕಂಡ ಕೆರೆ ತುಂಬಿಸುವ ಯೋಜನೆಗಳನ್ನು ಸಣ್ಣ ನೀರಾವರಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br><br>1.ಕಲಬುರಗಿ ಜಿಲ್ಲೆ ಕಲಬುರಗಿ ದಕ್ಷಿಣ ತಾಲ್ಲೂಕಿನ ಕೆರೆಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಬೆಣ್ಣೆತೊರ ಜಲಾಶಯದ ಮೇಲ್ಭಾಗದಿಂದ ಏತ ನೀರಾವರಿ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸುವ ರೂ.19771.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು. ಈ ಯೋಜನೆಯಲ್ಲಿ 8 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದ್ದು, ಇದುವರೆಗೆ ರೂ.7885.15 ಲಕ್ಷ ವೆಚ್ಚ ಮಾಡಲಾಗಿದೆ.<br><br>2.ಕಲಬುರಗಿ ಜಿಲ್ಲೆ ಕಲಬುರಗಿ ತಾಲ್ಲೂಕಿನ ಹಾಗರಗುಂಡಗಿ ಕೆರೆಗೆ ಭೀಮಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ರೂ.1110.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು. ಕಾಮಗಾರಿ ಪ್ರಗತಿಯಲ್ಲಿದೆ. |

ಜಲ ಸಂಪನ್ಮೂಲ ಇಲಾಖೆಯಡಿ ಕೈಗೊಳ್ಳಲಾಗುತ್ತಿರುವ ಕೆರೆ ತುಂಬಿಸುವ ಯೋಜನೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ | | | |
|---|---|---|---|
| ಕ್ರ. ಸಂ | ಯೋಜನೆ | ಸಂಖ್ಯೆ | ಪ್ರಸ್ತುತ ಹಂತ |
| 1 | ಭೀಮಾ ನದಿಯಿಂದ ಲಿಫ್ಟ ಮುಖಾಂತರ ಯಾದಗಿರಿ ತಾಲ್ಲೂಕಿನ 35 ಸಣ್ಣ ಮತ್ತು ಜಿಲ್ಲಾ ಪಂಚಾಯಿತಿ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ. | 35 | ಕೆರೆಗಳಿಗೆ ಪ್ರಾಯೋಗಿಕವಾಗಿ 2023-24ರ ಸಾಲಿನಲ್ಲಿ ಭಾಗಶ: ನೀರು ತುಂಬಿಸಲಾಗಿದೆ. ಅಂತರ್ಜಲ ಮರು ಅಭಿವೃದ್ಧಿಗೊಳಿಸಲಾಗಿದೆ. |
| 2 | ಭೀಮಾ ನದಿ ಪಾತ್ರದಡಿಯ ಯಾದಗಿರಿ ಜಿಲ್ಲೆಯ ಗುರುಮಠಕಲ್ ವಿಧಾನ ಸಭಾ ಕ್ಷೇತ್ರದ 20 ಕೆರೆಗಳಿಗೆ ಭೀಮಾ ನದಿಯಿಂದ ನೀರು ತುಂಬಿಸುವ ಯೋಜನೆ | 20 | ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಕೆರೆಗಳನ್ನು ತುಂಬಿಸಿ ಅಂತರ್ಜಲ ಮಟ್ಟ ವೃದ್ಧಿಗೊಳಿಸಬಹುದಾಗಿರುತ್ತದೆ. |
| 3 | ಯರಗೋಳ ಮತ್ತು ಇತರ 5 ಕೆರೆಗಳನ್ನು ತುಂಬಿಸುವ ಯೋಜನೆ. | 6 | ಕೆರೆಗಳಿಗೆ ಪ್ರಾಯೋಗಿಕವಾಗಿ 2023-24ರ ಸಾಲಿನಲ್ಲಿ ಭಾಗಶ: ನೀರು ತುಂಬಿಸಲಾಗಿದೆ. ಅಂತರ್ಜಲ ಮರು ಅಭಿವೃದ್ಧಿ-ಗೊಳಿಸಲಾಗಿದೆ. |
| 4 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2 ರಡಿಯಲ್ಲಿನ ಜೇವರ್ಗಿ ಶಾಖಾ ಕಾಲುವೆ, ಶಹಾಪುರ ಶಾಖಾ ಕಾಲುವೆ, ಮುಡಬಾಳ್ ಶಾಖಾ ಕಾಲುವೆಗಳ ವಿತರಣಾ/ಲ್ಯಾಟರಲ್ ಕಾಮಗಾರಿಗಳಿಂದ ಯಾದಗಿರಿ & ಕಲಬುರ್ಗಿ ಜಿಲ್ಲೆಗಳಿಗೆ ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆÉ. | 16 | ಕೆರೆಗಳಿಗೆ ನೀರು ತುಂಬಿಸಲಾಗಿದ್ದು, ಅಂತರ್ಜಲ ಮರು ಅಭಿವೃದ್ಧಿಗೊಳಿಸಲಾಗಿದೆ. |
| 5 | ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರಡಿ ಮಲ್ಲಾಬಾದ್ ಏತ ನೀರಾವರಿ ಯೋಜನೆ ಮುಖಾಂತರ ಯಾದಗಿರಿ & ಕಲಬುರ್ಗಿ ಜಿಲ್ಲೆಗಳಿಗೆ ನೀರು ತುಂಬಿಸುವ ಯೋಜನೆ | 4 | ಖಾನಾಪುರ ಕೆರೆಗೆ ನೀರು ತುಂಬಿಸಲಾಗಿದ್ದು ಅಂತರ್ಜಲ ಮರು ಅಭಿವೃದ್ಧಿ-ಗೊಳಿಸಲಾಗಿದೆ. ಜೇವರ್ಗಿ ತಾಲ್ಲೂಕಿನ ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಕೆರೆಗಳನ್ನು ತುಂಬಿಸಿ ಅಂತರ್ಜಲ ಮಟ್ಟ ವೃದ್ಧಿಗೊಳಿಸಬಹುದಾಗಿರುತ್ತದೆ. |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | | | |
| 6 | ಅಫಜಲಪೂರ ಹಾಗೂ ಆಳಂದ ತಾಲ್ಲೂಕಿನ 13 ಕೆರೆ ತುಂಬಿಸುವುದು ಹಾಗೂ ಅಮರ್ಜಾ ಜಲಾಶಯ ತುಂಬಿಸುವ ಯೋಜನೆ. | 13 | Turnkey ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 7 | ಕಲಬುರಗಿ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಬಂದರವಾಡ ಮತ್ತು ಮಣ್ಣೂರು ಗ್ರಾಮದ ಹತ್ತಿರ ಹರಿಯುವ ಭೀಮಾ ನದಿಯಿಂದ ನೀರನ್ನೆತ್ತಿ ಅಫಜಲಪೂರ ತಾಲ್ಲೂಕಿನ 7 ಕೆರೆಗಳನ್ನು ತುಂಬಿಸುವ ಯೋಜನೆ. | 07 | ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 8 | ಆಳಂದ ತಾಲ್ಲೂಕಿನ 8 ಹೆಚ್ಚುವರಿ ಕೆರೆಗಳನ್ನು ಬೋರಿ ನದಿಯಿಂದ ನೀರನ್ನೆತ್ತಿ ತುಂಬಿಸುವ ಯೋಜನೆ. | 08 | ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

ಕಡತಸಂಖ್ಯೆ:MID 40 LCQ 2024

(ಎನ್. ಎಸ್. ಭೋಸೆರಾಜು)
ಸಣ್ಣ ನೀರಾವರಿ, ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ 950 ಕ್ಕೆ ಸಂಬಂಧಿಸಿದ ಅನುಬಂಧ – 1

ಕಲಬುರಗಿ ಜಿಲ್ಲೆ :

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | ಗ್ರಾಮ | ಕೆರೆ | ಸಂಘದ ಹೆಸರು |
|---|---|---|---|---|---|---|
| 1 | ಕಲಬುರಗಿ | ಚಿತಾಪುರ | ಚಿತಾಪುರ | ಬೆನ್ನಟ್ಟಿ | ಬೆನ್ನಟ್ಟಿ ಕೆರೆ | ಹಜರತ್ ಶಹ ಅಬ್ದುಲ ಬಾಶಾ ಕೆರೆ ಬಳಕೆದಾರರ ಸಂಘ |
| 2 | ಕಲಬುರಗಿ | ಚಿತಾಪುರ | ಚಿತಾಪುರ | ತರಕಾಸಾಪೇಟ | ತರಕಾಸಾಪೇಟ ಕೆರೆ | ಆದಿಬಸವೇಶ್ವರ ಕೆರೆ ಅಭಿವೃದ್ಧಿ ಸಂಘ |
| 3 | ಕಲಬುರಗಿ | ಆಳಂದ | ಆಳಂದ | ಮಾದನ ಹಿಪ್ಪರಗಾ | ಮಾದನ ಹಿಪ್ಪರಗಾ ಕೆರೆ | ಶ್ರೀ ಮಹಾಲಕ್ಷ್ಮಿ ಕೆರೆ ಅಭಿವೃದ್ಧಿ ಸಂಘ |
| 4 | ಕಲಬುರಗಿ | ಶಾಹಾಬಾದ | ಕಲಬುರಗಿ ಗ್ರಾ | ಶಾಹಬಾದ | ಶಾಹಬಾದ ಕೆರೆ | ಎಕ್ತಾ ಕೆರೆ ಅಭಿವೃದ್ಧಿ ಸಂಘ |
| 5 | ಕಲಬುರಗಿ | ಶಾಹಾಬಾದ | ಕಲಬುರಗಿ ಗ್ರಾ | ಶಾಹಬಾದ | ಮುಗುಲನಾಗಾಂವ ಕೆರೆ | ಬಸವೇಶ್ವರ ಕೆರೆ ಅಭಿವೃದ್ಧಿ ಸಂಘ |
| 6 | ಕಲಬುರಗಿ | ಚಿತಾಪುರ | ಚಿತಾಪುರ | ಆಲೊರ | ಆಲೊರ ಕೆರೆ | ದುರ್ಗಾ ಪರಮೇಶ್ವರಿ ಕೆರೆ ಅಭಿವೃದ್ಧಿ ಸಂಘ |
| 7 | ಕಲಬುರಗಿ | ಕಾಳಗಿ | ಚಿಂಚೊಳ್ಳಿ | ಅರಣಕಲ | ಅರಣಕಲ ಕೆರೆ | ರೇವಣ ಸಿದ್ದೇಶ್ವರ ಕೆರೆ ಅಭಿವೃದ್ಧಿ ಸಂಘ |

ಯಾದಗಿರಿ ಜಿಲ್ಲೆ :

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | ಗ್ರಾಮ | ಕೆರೆ | ಸಂಘದ ಹೆಸರು |
|---|---|---|---|---|---|---|
| 1 | ಯಾದಗಿರಿ | ಯಾದಗಿರಿ | ಗುರುಮಠಕಲ್ | ದುಪ್ಪಲ್ಲಿ | ಹೊಸ ಕೆರೆ | ಶ್ರೀ ಆಂಜನೇಯ ಕೆರೆ ಅಭಿವೃದ್ಧಿ ಸಂಘ |
| 2 | ಯಾದಗಿರಿ | ಯಾದಗಿರಿ | ಗುರುಮಠಕಲ್ | ದುಪ್ಪಲ್ಲಿ | ಕುಂಬಾರ ಕುಂಟಾ ಕೆರೆ | |
| 3 | ಯಾದಗಿರಿ | ಯಾದಗಿರಿ | ಗುರುಮಠಕಲ್ | ಬಂದಳ್ಳಿ | ಬಂದಳ್ಳಿ ಕೆರೆ | ಶ್ರೀ ಮಡಿ ಬಸವೇಶ್ವರ ಕೆರೆ ಅಭಿವೃದ್ಧಿ ಸಂಘ |
| 4 | ಯಾದಗಿರಿ | ಯಾದಗಿರಿ | ಯಾದಗಿರಿ | ರಾಮಸಮುದ್ರಾ | ಊರ ಕೆರೆ | ಶ್ರೀ ಮಸೇಮ್ಮ ದೇವಿ ಕೆರೆ ಅಭಿವೃದ್ಧಿ ಸಂಘ |
| 5 | ಯಾದಗಿರಿ | ಗುರುಮಠಕಲ್ | ಗುರುಮಠಕಲ್ | ಪಸಪೂಲ್ | ಹೊಸ ಕರೆ | ಶ್ರೀ ಮಸೇಮ್ಮ ದೇವಿ ಕೆರೆ ಅಭಿವೃದ್ಧಿ ಸಂಘ |
| 6 | ಯಾದಗಿರಿ | ಯಾದಗಿರಿ | ಯಾದಗಿರಿ | ಹಳಿಗೇರಾ | ತೂರ ಕೆರೆ | ಶ್ರೀ ಹಳಿಗೇರಾ ಕೆರೆ ಅಭಿವೃದ್ಧಿ ಸಂಘ |
| 7 | ಯಾದಗಿರಿ | ಸುರಪುರ | ಸುರಪುರ | ಮಾವಿನಮಟ್ಟಿ | ಮಾವಿನಮಟ್ಟಿ ಕೆರೆ | ಶ್ರೀ.ಮಾರುತೇಶ್ವರ ಕೆರೆ ಅಭಿವೃದ್ಧಿ ಸಂಘ |